2272(2828) ಶ್ರೀ ಜಿ. ಬಸವಣ್ಣೆಪ್ಪ (ಹೊಳೆಹೊನ್ನೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ವಾರ್ಷಿಕ ಸಂಗ್ರಹವಾಗುವ ಕಸದ ಪ್ರಮಾಣ ಎಷ್ಟು;

ಆ) ಇದನ್ನು ಬೆಂಗಳೂರು ಮಹಾನಗರ ಪಾಲಿಕೆಯವರು ಯಾವ ರೀತಿ ವಿಲೇವಾರಿ ಮಾಡುತ್ತಾತ;

ಇ) ಈ ಕಸವನ್ನು ಗೊಬ್ಬರವನ್ನಾಗಿ ಮಾರ್ಪಡಿಸಿ ಕೃಷಿಕರಿಗೆ ಒದಗಿಸುವ ಆಲೋಚನೆ ಮಹಾನಗರ ಪಾಲಿಕೆಗೆ ಇದೆಯೇ (ವಿವರಗಳನ್ನು ಒದಗಿಸುವುದು);

ಈ) ಒಂದು ವೇಳೆ ಇಂಥಹ ಆಲೋಚನೆ ನಗರ ಪಾಲಿಕೆಗೆ ಇಲ್ಲದಿದ್ದಲ್ಲಿ ಈಗಾಲಾದರೂ ಈ ಬಗ್ಗೆ ಆಲೋಚನೆ ಮಾಡಿ ಆಸಕ್ತಿ ವಹಿಸುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿದಿನ ಸುಮಾರು 2000 ಮೆಟ್ರಿಕ್ ಟನ್ ಕಸ ಉತ್ಪತ್ತಿಯಾಗುತ್ತಿದೆ.

ಆ) ಪ್ರತಿದಿನ ಉತ್ಪತ್ತಿಯಾದ ಕಸದಲ್ಲಿ ಸುಮಾರು 350–400 ಮೆಟ್ರಿಕ್ ಟನ್ ಕಸವನ್ನು ಗೊಬ್ಬರವನ್ನಾಗಿ ಪರಿವರ್ತಿಸಲಾಗುತ್ತಿದೆ. ಉಳಿದ ಕಸವನ್ನು ನಗರದ ಹೊರ ವಲಯದಲ್ಲಿರುವ ಕಸ ಸಂಗ್ರಹಣಾ ಸ್ಥಳಗಳಲ್ಲಿ ತುಂಬಲಾಗುತ್ತಿದೆ.

ಇ&ಈ) ಪ್ರತಿದಿನ ಉತ್ಪತ್ತಿಯಾದ ಕಸದಲ್ಲಿ ಸುಮಾರು 350–400 ಮೆಟ್ರಿಕ್ ಟನ್ ಕಸವನ್ನು ಗೊಬ್ಬರವನ್ನಾಗಿ ಪರಿವರ್ತಿಸಲಾಗುತ್ತಿದೆ. ಇದಲ್ಲದೇ, ಸುಮಾರು 300 ಟನ್ ಕಸವನ್ನು ಸಹ ಗೊಬ್ಬರವನ್ನಾಗಿ ಪರಿವರ್ತಿಸಲು ಖಾಸಗಿ ಕಂಪೆನಿಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಕೆಲಸ ಪ್ರಾರಂಭಿಸುವ ಹಂತದಲ್ಲಿರುತ್ತದೆ.

2273(2829) ಶ್ರೀ ಜಿ. ಬಸವಣ್ಣೆಪ್ಪ (ಹೊಳೆಹೊನ್ನೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿರುವ ಒಟ್ಟು ರಸ್ತೆಗಳ ಉದ್ದ ಎಷ್ಟು;

ಆ) ಈ ರಸ್ತೆಗಳಿಗೆ ತಗಲುವ ಮೇಲ್ವಿಚಾರಣಾ ವೆಚ್ಚವೆಷ್ಟು (ವಾರ್ಷಿಕ ವೆಚ್ಚವಾರು ವಿವರ ನೀಡುವುದು);

ಇ) ಈ ರಸ್ತೆಗಳ ಮೇಲ್ವಿಚಾರಣೆಯನ್ನು ಖಾಸಗೀಕರಣಗೊಳಿಸುವ ಪ್ರಸ್ತಾವವು ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ, ವಿವರಗಳನ್ನು ತಿಳಿಸುವುದು?

(ಈ) ಬಹುತೇಕ ರಸ್ತೆಗಳು ಇನ್ನೂ ರಿಪೇರಿ ಆಗಿರುವುದಿಲ್ಲ ಹಾಗೂ ಅವುಗಳನ್ನು ಅಗಲ ಮಾಡುವ ಅವಶ್ಯಕತೆ ಇರುತ್ತದೆ;

(ಉ) ಈ ದಿಸೆಯಲ್ಲಿ ಸರ್ಕಾರ ಆಲೋಚಿಸಿರುವ ಕ್ರಮ ಏನು ಹಾಗೂ ಅವುಗಳ ವೆಚ್ಚ ಎಷ್ಟು?

(ಊ)ನಗರದಲ್ಲಿರುವ ಮೇಲು ಸೇತುವೆಗಳೆಷ್ಟು?

(ಖ) ಹೊಸದಾಗಿ ಏನಾದರೂ ಮೇಲು ಸೇತುವೆಗಳ ನಿರ್ಮಾಣ ಯೋಜನೆ ಸರ್ಕಾರದ ಮುಂದೆದೆಯೇ (ವಿವರಗಳನ್ನು ಒದಗಿಸುವುದು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):

ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 3500 ಕಿ.ಮೀ. ಉದ್ದದ ರಸ್ತೆಗಳಿರುತ್ತವೆ.

ಆ) ಕಳೆದ ಮೂರು ವರ್ಷಗಳಲ್ಲಿ ರಸ್ತೆ ನಿರ್ವಹಣೆಗೆ ವೆಚ್ಚ ಮಾಡಿರುವ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತವೆ.

1) 2002–03 –ರೂ. 228.33 ಲಕ್ಷಗಳು
2) 2003–04 –ರೂ. 289.16 ಲಕ್ಷಗಳು
3) 2004–05 –ರೂ. 347.45 ಲಕ್ಷಗಳು

ಇ) ಇದೆ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1225 ಕಿ.ಮೀ. ಉದ್ದದ ರಸ್ತೆಯ ನಿರ್ವಹಣೆಯನ್ನು ಖಾಸಗೀಕರಣಗೊಳಿಸಿ ಮೂರು ವರ್ಷಗಳ ಅವಧಿಗೆ ನಿರ್ವಹಣೆಗಾಗಿ ಖಾಸಗಿ ಗುತ್ತಿಗೆದಾರರಿಗೆ ನವೆಂಬರ್–2004ರ ತಿಂಗಳಲ್ಲಿ ಕಾರ್ಯಾದೇಶ ನೀಡಲಾಗಿದೆ. ಈ ರಸ್ತೆ ನಿರ್ವಹಣೆಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲಾಗುವುದು.

1) ಗುಳಿ ಬಿದ್ದಿರುವ ಶೋಲ್ಡರ್‌ಗಳನ್ನು ನಿಗದಿತ ಮಟ್ಟಕ್ಕೆ ತುಂಬುವುದು.
2) ರಸ್ತೆ ಬದಿಯನ್ನು ನಿಗದಿತ ಕೇಂಬರ್ ಬರುವಂತೆ ಮಟ್ಟ ಮಾಡುವುದು.
3) ರಸ್ತೆ ಬಿರುಕುಗಳನ್ನು ಫಾಗ್ ಸೀಲ್/ ಸ್ಲಂ ಸೀಲ್‌ನಿಂದ ತುಂಬುವುದು.
4) ಡಾಂಬರು ಮೇಲ್ಮೈನಲ್ಲಿ ಗುಂಡಿಗಳನ್ನು ಮುಚ್ಚುವುದು ಮತ್ತು ತೇಪೆ ಹಾಕುವುದು.
5) ರಸ್ತೆಯ ಮೇಲೆ ಹರಿಯುವ ನೀರನ್ನು ತಪ್ಪಿಸಲು ಚರಂಡಿ ನಿರ್ಮಾಣಕ್ಕಾಗಿ ಮಣ್ಣನ್ನು ಕತ್ತಿರುಸುವುದು, ರಸ್ತೆ ಬದಿ ಚರಂಡಿ ಮತ್ತು ಇತರೆ ನಿರ್ಮಾಣಗಳ ನಿರ್ವಹಣೆ.
6) ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಮರದ ರೆಂಬೆ ಕತ್ತರಿಸುವುದು ವಿಭಜಕಗಳ ಮಧ್ಯದಲ್ಲಿನ ಮತ್ತು ರಸ್ತೆ ಬದಿಯಲ್ಲಿನ ಹುಲ್ಲು ಮತ್ತು ಗಿಡಗಂಟಿಗಳನ್ನು/ ರಸ್ತೆ ಬದಿಯಲ್ಲಿನ ಅಡಚಣೆಗಳನ್ನು ತೆಗೆಯುವುದು/ ಮಣ್ಣಿನ ರಾಶಿ ಗುಡ್ಡಗಳನ್ನು ತೆಗೆಯುವುದು.
7) ಸೂಚನಾಫಲಕಗಳು, ಪಹರೆ ಕಲ್ಲುಗಲು ಮತ್ತು ಇತರೆ ಮಾರ್ಗಸೂಚಿ ಫಲಕಗಳನ್ನು ಬದಲಾಯಿಸುವುದು/ ಸಾಗಿಸುವುದು/ ಬಣ್ಣ ಬಳಿಯುವುದು.
8) ಪಾದಚಾರಿ ಮಾರ್ಗದಲ್ಲಿ ಹಾಳಾಗಿರುವ ಚಪ್ಪಡಿ ಕಲ್ಲುಗಳನ್ನು ಬದಲಾಯಿಸುವುದು ಮತ್ತು ಸೇತುವೆ/ ಕಲ್ವರ್ಟ್‌ಗಳಲ್ಲಿ ಹಾಳಾಗಿರುವ ರೈಲಿಂಗ್‌ಗಳನ್ನು ಬದಲಾಯಿಸುವುದು.
9) ನಾಮಫಲಕಗಳಿಗೆ ಬಣ್ಣ ಬಳಿಯುವುದು.

1225 ಕಿ.ಮೀ. ಉದ್ದದ ರಸ್ತೆಗಳನ್ನು ಮೂರು ವರ್ಷದ ಅವಧಿಗೆ ನಿರ್ವಹಣೆ ಮಾಡಲು ಸುಮಾರು 18.00 ಕೋಟಿ ರೂ. ವೆಚ್ಚ ತಗುಲಲಿದೆ.

(ಈ) ದುಸ್ಥಿತಿಯಲ್ಲಿದ್ದ ರಸ್ತೆಗಳ ದುರಸ್ತಿ ಕೆಲಸ ಪ್ರಗತಿಯಲ್ಲಿದ್ದು, ಪ್ರಥಮ ಹಂತದಲ್ಲಿ 45 ರಸ್ತೆಗಳನ್ನು ಅಗಲೀಕರಣಗೊಳಿಸಲು ಉದ್ದೇಶಿಸಲಾಗಿದ್ದು, ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.

(ಉ) 45 ಅಗಲೀಕರಣಗೊಳಿಸುವ ರಸ್ತೆಗಳ ಸರ್ವೆ ಕಾರ್ಯ ಮುಗಿದ ನಂತರ ಅಂದಾಜುಗಳನ್ನು ತಯಾರಿಸಲಾಗುವುದು. ಈ ಕಾರ್ಯಕ್ಕೆ ಪೂರಕವಾಗಿ 1000 ಕಿ.ಮೀ. ರಸ್ತೆ ಅಭಿವೃದ್ಧಿ ಕಾರ್ಯವನ್ನು 130.00 ಕೋಟಿ ರೂ.ಗಳಲ್ಲಿ ತೆಗೆದುಕೊಳ್ಳಲಾಗಿದೆ. ಪ್ರತಿ ಹಣಕಾಸ ವರ್ಷದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅನುದಾನವನ್ನು ಮೀಸಲಿಡಲಾಗುತ್ತದೆ.

(ಊ) 10 (ಹತ್ತು).

(ಋ) ಹೌದು.

1) ಹೆಚ್ಚು ವಾಹನ ಸಂಚಾರವಿರುವ ಈ ಕೆಳಗಿನ ಸ್ಥಳಗಳಲ್ಲಿ ಮೇಲು ಸೇತುವೆ/ ಆರ್.ಓ.ಬಿ./ ಆರ್.ಯು.ಬಿ. ಗಳನ್ನು ನಿರ್ಮಿಸಲು ಬೆಂಗಳೂರು ಮಹಾನಗರ ಪಾಲಿಕೆಯು ಉದ್ದೇಶಿಸಿದೆ.

1) ಯಶವಂತಪುರ ವೃತ್ತ
2) ಮಿನರ್ವ ವೃತ್ತ
3) ಬೈಯಪ್ಪನಳ್ಳಿ ಹತ್ತಿರ ಆರ್.ಓ.ಬಿ/ ಆರ್.ಯು.ಬಿ.
4) ಐ.ಟಿ.ಸಿ. ಕಾರ್ಖಾನೆ ಹತ್ತಿರ ಆರ್.ಓ.ಬಿ.
5) ಕನಕಪುರ ರಸ್ತೆ ಮತ್ತು ವರ್ತುಲ ರಸ್ತೆ ಜಂಕ್ಷನ್
6) ಮತ್ತಿಕೆರೆ ಆರ್.ಓ.ಬಿ.
7) ಗಂಗೊಂಡನಹಳ್ಳಿ ಆರ್.ಓ.ಬಿ.

2) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊರ ವರ್ತುಲ ರಸ್ತೆ ಮತ್ತು ಎಲೆಕ್ಟಾನ್ ಸಿಟಿಗಳ ನಡುವೆ ಯೋಜಿತ ಹೈಟೆಕ್ ಸಿಟಿ ಕಾರಿಡಾರ್ ರಸ್ತೆಯಲ್ಲಿ ಎರಡು (2) ಮೇಲ್ಸೇತುವೆಗಳನ್ನು ನಿರ್ಮಿಸಲು ಯೋಜಿಸಿರುತ್ತದೆ.

2274(2234) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ):– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಚಾವತ್ ನ್ಯಾಯಾಧೀಕರಣದಂತೆ ಕರ್ನಾಟಕ ರಾಜ್ಯಕ್ಕೆ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸ್ಕೀಂ 'ಎ' ಅನ್ವಯ ಬಿ.ಎಂ.ಸಿ.ಯಲ್ಲಿ ನೀರು ಹಂಚಿಕೆಯಾಗಿರುವ ಪ್ರಮಾಣವೆಷ್ಟು;

ಆ) ಈ ನೀರಿನ ಹಂಚಿಕೆಯನ್ನು ಯಾವ ಯಾವ ನದಿಗಳು, ಉಪ ನದಿಗಳು ಹಾಗೂ ಜಲಾಶಯಗಳಿಂದ ಭಾರಿ ನೀರಾವರಿ, ಮಧ್ಯಮ ನೀರಾವರಿ ಹಾಗೂ ಸಣ್ಣ ನೀರಾವರಿಯಗಳಿಗೆ ಹಂಚಿಕೆಯಾಗಿರುವ ನೀರಿನ ಪ್ರಮಾಣವೆಷ್ಟು (ಪೂರ್ಣ ಮಾಹಿತಿ ಒದಗಿಸುವುದು).

ಇ) ಈ ನೀರಿನ ಹಂಚಿಕೆಯಲ್ಲಿ ಕೃಷ್ಣ ಜಲಾಶಯದ ಅಂತರ್ಜಲವು ಸೇರಿದೆಯೆ;

ಈ) ಹಾಗಿದ್ದಲ್ಲಿ, ಅದರ ಪ್ರಮಾಣವೆಷ್ಟು;